ಕಳೆದು ಹೋಗಿರುವುದು ಯಾವತ್ತಿಗೂ ಮರಳಿ ಸಿಗಲಾರದೆನ್ನುವ ವಾಸ್ತವವನ್ನು ಒಪ್ಪಿಕೊಳ್ಳಲೇಬೇಕಾಗಿರುವುದು ಬದುಕಿನ ಅನಿವಾರ್ಯ. ಮತ್ತು ಹಾಗೆ ಒಪ್ಪಿಕೊಳ್ಳುತ್ತಲೇ ಪ್ರಸ್ತುತಕ್ಕೆ ಹೊಂದಿಕೊಳ್ಳಬೇಕಾದ್ದೂ ಸಹಾ...

***

'ಭೀಕರ ರಸ್ತೆ ಅಪಘಾತ'ದಲ್ಲಿ ಕೈ ಹಿಡಿದವನು ಸ್ಥಳದಲ್ಲೇ ದುರ್ಮರಣಕ್ಕೊಳಗಾದಾಗ ಛಾಯಾ ಆರು ತಿಂಗಳ ಗರ್ಭಿಣಿ. 'ಅಯ್ಯೋ ಪಾಪ' ಎನ್ನುವ ಲೊಚಗುಟ್ಟುವಿಕೆಗೆ ಈ ಬಸಿರು ಕೂಡಾ ದೊಡ್ಡ ಕಾರಣವಾಗಿತ್ತು. ಏರುಪ್ರಾಯದಲ್ಲಿದ್ದ ಏಕೈಕ ಪುತ್ರನನ್ನು ಕಳೆದುಕೊಂಡ ಸುನಂದಮ್ಮನ ವ್ಯಥೆ ಹೆಚ್ಚೋ, ಗಂಡನನ್ನು ಕಳೆದುಕೊಂಡ ಚೊಚ್ಚಲ ಗರ್ಭಿಣಿಯ ನೋವು ಹೆಚ್ಚೋ ಅರ್ಥವಾಗದ ಪರಿಸ್ಥಿತಿ. ಅದ್ಯಾವ ಗಳಿಗೆಯಲ್ಲಿ ಸೆಕೆಂಡ್ ಹ್ಯಾಂಡ್ ಸ್ಕೂಟರಿನ ಹಿಂದೆ ಬಿದ್ದನೋ ಗಂಡ, ಅದೇ ಅವನಿಗೆ ಮುಳುವಾಗಿತ್ತು.

"ಹೊಟ್ಟೇಲಿರೋ ಮಗಿನ ಮುಖ ನೋಡೋಕೂ ದೇವರು ಬಿಡ್ಲಿಲ್ಲ. ಅವನ ಮನೆ ನಾಶನವಾಗ..." ಎನ್ನುವಂತಾ ಅರ್ಥರಹಿತ ಮಾತುಗಳನ್ನು ಬಡಬಡಿಸುತ್ತಲೇ ಸುನಂದಮ್ಮ ಸೆರಗು ಸೊಂಟಕ್ಕೆ ಕಟ್ಟಿಕೊಂಡಿದ್ದರು. ಬಸುರಿ ಎಂದು ಛಾಯಾ ವಿನಾಯಿತಿ ಬಯಸಲಿಲ್ಲ. ಅತ್ತೆಯ ಜೊತೆ ಮನೆಯ ಕೆಲಸಕಾರ್ಯಗಳಲ್ಲದೆ ಕೃಷಿ ಕೆಲಸಗಳಲ್ಲೂ ಕೈ ಜೋಡಿಸಿದಳು. 'ಬೇಡ' ಎನ್ನಲಿಲ್ಲ ಅತ್ತೆ. 'ಸುಮ್ನೆ ಕೂತ್ಗಂಡಿದ್ರೆ ಅದದೇ ತಲೇಲಿ ಸುಳೀತಿರುತ್ತೆ. ಕೆಲಸ ಮಾಡ್ತಿದ್ರೆ ಹೊತ್ತು ಕಳೆಯುತ್ತೆ' ಎನ್ನುತ್ತಿದ್ದ ಅತ್ತೆ ಯಾವ ಉದ್ದೇಶವನ್ನಾದರೂ ಮನಸ್ಸಿನಲ್ಲಿಟ್ಟುಕೊಂಡು ಹೇಳಿರಲಿ, ಹಗಲಿಡೀ ಮೈ ಹುಡಿಯಾಗುವಷ್ಟು ಗೆಯ್ಯುತ್ತಿದ್ದವಳಿಗೆ ರಾತ್ರಿ ಹೊಡೆದು ಹಾಕಿದ ಹಾಗೆ ನಿದ್ದೆ ಬರುತ್ತಿತ್ತು. ಗಂಡ ಇನ್ನೂ ಮಗ್ಗುಲಲ್ಲಿ ಮಲಗಿದ್ದಾನೆಂಬ ಭಾವನೆಯಿಂದ ಅರೆನಿದ್ದೆಯಲ್ಲಿ ಅವನನ್ನು ಬಳಸಲು ಕೈಗಳು ಮುಂದಾಗುತ್ತಿದ್ದುದು ಅದೆಷ್ಟು ಸಲವೋ? 'ಬಾಣಂತನಕ್ಕೆ ತೌರಿಗೆ ಹೋಗ್ಲೇಬೇಕನೇ?' ಎಂದು ಗಂಡ ಕಿವಿಯಲ್ಲಿ ಪಿಸುಗುಟ್ಟಿದಂತಾಗುತ್ತಿದ್ದುದು, ಬಿಸಿಯುಸಿರು ಕೊರಳಿಗೆ ಕಚಗುಳಿ ಇಟ್ಟಂತಾಗುತ್ತಿದ್ದುದು, ಅವನ ಅನುಪಸ್ಥಿತಿಯನ್ನು ಸುಪ್ತಮನಸ್ಸು ಒಪ್ಪಿಕೊಳ್ಳುತ್ತಲೇ ಇರಲಿಲ್ಲ. ಆವತ್ತೂ ಇಲ್ಲ, ಇವತ್ತಿಗೂ ಇಲ್ಲ.

ದಿನ ತುಂಬಿ ಮುದ್ದಾದ ಗಂಡುಮಗು ಹುಟ್ಟಿದಾಗ ಬಲವಂತವಾಗಿ ತಡೆಹಿಡಿದಿಟ್ಟುಕೊಂಡಿದ್ದ ಅತ್ತೆಯ ದುಃಖ ಭೋರ್ಗರೆದು ಹರಿದಿತ್ತು. "ನಿನ್ನಪ್ಪ ಇರ್ಬೇಕಿತ್ತು, ಎಷ್ಟು ಆಸೆ ಮಾಡ್ತಿದ್ನೋ, ತಲೇಮೇಲೆ ಹೊತ್ಗಂಡು ಮೆರೆದಾಡಿಸ್ತಿದ್ದ..." ಮೊಮ್ಮಗನನ್ನು ಎದೆಗಪ್ಪಿಕೊಂಡು ಅತ್ತೆ ಕಣ್ಣೀರಿಡುವಾಗ ಛಾಯಾ ಕೂಡಾ ಭೋರೆಂದು ಅತ್ತಿದ್ದಳು. "ಬಾಣಂತಿ ಅಳ್ಬಾರ್ದು ಕಣೇ, ನಂಜಾಗುತ್ತೆ. ನೀನೂ ಕೈಕೊಟ್ಟು ಎದ್ದು ನಡೆದ್ರೆ ಇದನ್ನ ಕಟ್ಗಂಡು ನಾನೆಲ್ಲಿ ಸಾಯ್ಲಿ? ಬಾವಿ ಹಾರ್ಕಂಬೇಕಷ್ಟೇ. ತಗಾ, ನಿನ್ನ ಮಗನ್ನ ನೀನೇ ಜೋಪಾನ ಮಾಡ್ಕಾ..." ಸೊಸೆಯ ಮಗ್ಗುಲಲ್ಲಿ ಮಗುವನ್ನು ಮಲಗಿಸಿ ಒಳಗೆದ್ದು ಹೋಗಿದ್ದರು ಸುನಂದಮ್ಮ. ತಂಗಿ ಹಡೆದ ವರ್ತಮಾನ ತಲುಪಿದಾಗ ಅಣ್ಣ ಬಂದು ಮಾತಾಡಿಸಿಕೊಂಡು ಹೋಗಿದ್ದ. "ಇದರ ಮಕ ನೋಡ್ಕಂಡು ಬದುಕು ಮಾಡ್ಬೇಕು ನೀನು. ದೇವ್ರು ಇಷ್ಟಾದ್ರೂ ಕೃಪೆ ತೋರ್ಸಿದಾನಲ್ಲ..." ಸಂತೈಕೆಯ ಮಾತಾಡಿದ್ದ.

ಸುನಂದಮ್ಮ ಬಾಣಂತಿಯ ಆರೈಕೆಯಲ್ಲಿ ಕೈ ಚೊಟ್ಟ ಮಾಡಿರಲಿಲ್ಲ. "ನಮ್ಮ ದುಕ್ಕ, ನಮ್ಮ ಸಂಕಟ ನಮಗೆ ಇದ್ದೇ ಇರುತ್ತೆ. ಹಂಗಂತ ನೀನು ಹಾಲು, ತುಪ್ಪ ಉಣ್ದಿದ್ರೆ ಮಗೂಗೆ ಎದೆಹಾಲು ಬೇಡ್ವಾ? ಪಾಪ ಮಾಡಿ ಹುಟ್ಟಿದೆ ಹೌದು, ಹಂಗಂತ ಗೊಬ್ಬರದ ಗುಂಡಿಗೆ ಬಿಸಾಕೋಕಾಗುತ್ತಾ? ಎಷ್ಟಾರೂ ನಮ್ಮನೆ ಮಗು. ನಮ್ಮ ವಂಶದ ಕುಡಿ." ಸುಸೂತ್ರವಾಗಿ ಬಾಣಂತನದ ಅವಧಿ ಪೂರೈಸುವಂತೆ ನೋಡಿಕೊಂಡಿದ್ದರು ಸುನಂದಮ್ಮ.

***

'ಕ್ಷಣ ಚಿತ್ತ, ಕ್ಷಣ ಪಿತ್ತ'ದ ಸ್ವಭಾವ ಸುನಂದಮ್ಮನದು. ತನ್ನ ಮದುವೆಯಾಗಿ ಈ ಮನೆಗೆ ಬಂದಾಗಿನಿಂದ ನೋಡಿದ್ದಾಳಲ್ಲ ಛಾಯಾ, ಅವರ ಸ್ವಭಾವವೇ ಅಂತಾದ್ದು. 'ಅಮಾಸೆಗೆ, ಹುಣ್ಣಿಮೆಗೆ ಕೆರಳುತ್ತೆ ಅಮ್ಮಂಗೆ. ನಂಗಲ್ಲ ಅನ್ನೋ ಹಾಗೆ ತೆಪ್ಪಗಿದ್ಬಿಡು' ಗಂಡ ಉಪದೇಶ ಮಾಡಿದ ಹಾಗೆ ನಡೆದುಕೊಂಡು ಮನೆಯ ಶಾಂತಿ ಕದಡದಂತಿರಲು ಛಾಯಾ ಹೃತ್ಪೂರ್ವಕವಾಗಿ